
ತೇಜಶ್ರೀ ಗುರುತಿಸುವಂತೆ ಪು.ತಿ.ನ. ಅವರ ಕಾವ್ಯದ ಮೂಲಸ್ವಭಾವವೇ ಜಿಜ್ಞಾಸೆಯಾಗಿದೆ. ಅವರು ಒಬ್ಬ ತಾತ್ವಿಕರು, ತತ್ವಜ್ಞಾನಿಗಳು, ಪ್ರಾಯಶಃ ಅವರ ಒಟ್ಟು ಕಾವ್ಯವೇ ಈ ತಾತ್ವಿಕ ಜಿಜ್ಞಾಸೆಗೆ ಕಾವ್ಯಶರೀರವನ್ನು ಹುಡುಕುವ ಪ್ರಯತ್ನವಾಗಿದೆ. ಆದರೆ ಈ ಜಿಜ್ಞಾಸೆ ಕಾವ್ಯದಲ್ಲಿ ಸಶರೀರವಾಗಿ, ಕಾವ್ಯಕ್ಕೆ ಇರುವ ತನ್ನದೇ ಆದ ಪ್ರತ್ಯೇಕವೂ, ಸ್ವತಂತ್ರವೂ ಆದ ಅಸ್ತಿತ್ವದ ನೆಲೆಗಳನ್ನು ಒಪ್ಪಿಕೊಂಡೇ ಪ್ರವೇಶ ಮಾಡಬೇಕಾಗಿರುವುದು ಅನಿವಾರ್ಯ. ಇದನ್ನು ಪು.ತಿ.ನ. 'ಬುದ್ಧಿ ಭಾವವಾಗುವ ಬಗೆ' ಎಂದು ವಿವರಿಸುತ್ತಾರೆ.

ಈ ಕಾವ್ಯವು 'ಮಲೆದೇಗುಲ'ವೆನ್ನುವ ವಾಸ್ತವ ಸಂಕೇತವೊಂದರ ಕುರಿತು ಸುದೀರ್ಘವಾದ ಚಿಂತನೆಯಾಗಿದೆ. (reflection ಅನ್ನುವ ಅರ್ಥದಲ್ಲಿ) ಕಾವ್ಯದ ಸ್ವರೂಪದ ಬಗ್ಗೆ ಅತ್ಯುತ್ತಮ ವಿವರಣೆಯನ್ನು ಪು.ತಿ.ನ. ಅವರೇ ತಮ್ಮ 'ಮೊದಲೆರಡು ಮಾತು' ಎನ್ನುವ ಶೀರ್ಷಿಕೆಯ ಮುನ್ನುಡಿಯಲ್ಲಿ ಕೊಟ್ಟಿದ್ದಾರೆ. ಅದನ್ನು ಇಲ್ಲಿ ಅನುಬಂಧದಲ್ಲಿ ಕೊಡಲಾಗಿದೆ. ಅವರು ಹೇಳುತ್ತಾರೆ: ಈ ಅನುಕ್ರಮಣಿಕೆಯಲ್ಲಿ ಒಂದು ಪದ್ಯದಿಂದ ಮತ್ತೊಂದಕ್ಕೆ ತಾರ್ಕಿಕ ಪ್ರಚೋದನೆ ಇಲ್ಲದಿರುವುದರಿಂದ ಇವು ಒಂದು ಸೂತ್ರಕ್ಕೆ ಕೋಡಂತಿಲ್ಲದೆ ಒಂದೇ ಭಾವಗೋಳವನ್ನು ತಿರುವಿ ತಿರುವಿ ನೋಡುತ್ತಾ ಕಂಡ ಕಂಡ ಮುಖಗಳನ್ನು ಬಣ್ಣಿಸುವ ರೀತಿಯಲ್ಲಿದೆ. ಈ ಲಹರಿಗೆ ನಿಜವಾಗಿ ಕೊನೆಯಿಲ್ಲ... ಇದಕ್ಕಿಂತ ಖಚಿತವಾದ ವಿವರಣೆ ಅಸಾಧ್ಯ. 'ಮಲೆದೇಗುಲ' ಕಾವ್ಯದ ಪ್ರತಿಯೊಂದು ಮುಕ್ತಕವೂ ಸ್ವತಂತ್ರವೇ. ಅದು ತಾರ್ಕಿಕವಾಗಿ ಮಂಡನೆಯಾಗುತ್ತಿರುವ ವಾದ ಅಥವಾ ತತ್ವದ ಒಂದು ಭಾಗವಲ್ಲ. ಪ್ರತಿ ಮುಕ್ತಕವನ್ನು ಸ್ವತಂತ್ರ ಪದ್ಯವಾಗಿ ಓದಬಹುದು. ಆದರೆ ಒಟ್ಟಾರೆಯಾಗಿ ಈ ಮುಕ್ತಕಗಳು ಕೆಲವು ಕೇಂದ್ರ ಕಾಳಜಿಗಳನ್ನು, ಪರಿಕಲ್ಪನೆಗಳನ್ನು ಬಳಸಿಕೊಳ್ಳುತ್ತವೆ. ಹೀಗಾಗಿ ಕಾವ್ಯಕ್ಕೆ ಒಟ್ಟಂದವೂ ಇದೆ.

ಈ ಕಾವ್ಯದ ಪ್ರಧಾನ ತಿಳಿವಳಿಕೆಯನ್ನು ತೇಜಶ್ರೀ ಸರಿಯಾಗಿ ಗುರುತಿಸಿದ್ದಾರೆ. ಇಡೀ ಕಾವ್ಯವು ದೇಗುಲದ ಬಗೆಗಿನ ವರ್ಣನೆ ಹಾಗೂ ಧ್ಯಾನವಾಗಿದ್ದರೂ ಕವಿ ದೇವಾಲಯವನ್ನು ಪ್ರವೇಶಿಸುವುದಿಲ್ಲ. ಒಂದು ಮುಕ್ತಕದಲ್ಲಿ ಮಾತ್ರ ದೇವರ ವಿಗ್ರಹದ ವರ್ಣನೆ ಇದೆ. ಇದು ಕೂಡ ಕವಿಯೇ ನೋಡುತ್ತ ವರ್ಣಿಸುವ ರೀತಿಯಲ್ಲಿಲ್ಲ. ಏಕೆಂದರೆ ಕವಿ ಧ್ಯಾನ ಮಾಡುತ್ತಿರುವುದು




**ಅರಿವು–ಇರವುಗಳ ಸನ್ನೆಗೈ:**
**ಪು.ತಿ.ನ. ಮಲೆದೇಗುಲ**
ಲೇ: ಜ.ನಾ. ತೇಜಶ್ರೀ
ಪು: 142; ಬೆ: ₹ 150
ಪ್ರ: ಡಾ. ಪು.ತಿ.ನ. ಟ್ರಸ್ಟ್, ಬೆಂಗಳೂರು.
ಫೋನ್: 9483913393.